
## ಕಥೋಪದೇಶ

# ತಾಯಿಯ ಪ್ರಾರ್ಥನೆ



**ಮ**ಗನಿಗೆ ದೇವರನ್ನು ನೋಡಬೇಕು ಎಂದು ಆಸೆ. ಅದಕ್ಕಾಗಿ ಮನೆ ಬಿಟ್ಟು ಹೋಗಲು ಅವನು ತನ್ನ ತಾಯಿಯ ಅನುಮತಿಯನ್ನು ಬೇಡಿದನು. ತಾಯಿ ಅವನಿಗೆ ಹೇಳಿದಳು: "ಮಗನೇ, ನಿನ್ನನ್ನು ನಾನು ಬಿಟ್ಟಿರಲು ಬಹಳ ಕಷ್ಟವಾಗುತ್ತದೆ. ಆದರೆ ನೀನು ಇಟ್ಟುಕೊಂಡಿರುವ ಆಸೆ ಬಹಳ ಉನ್ನತವಾದುದು, ಪವಿತ್ರವಾದುದು. ಭಗವಂತನ ದರ್ಶನವನ್ನು ಪಡೆದು ತಿರುಗಿ ಬಾ. ಆ ನಿನ್ನ ದಿವ್ಯಮೂರ್ತಿಯನ್ನು ನನಗೆ ತೋರಿಸು. ಇದೇ ನನ್ನಾಸೆ." ಹೀಗೆ ಹೇಳಿ ಆ ವೃದ್ಧ ತಾಯಿ ತನ್ನ ಪ್ರೀತಿಯ ಮಗನನ್ನು ಕಳಿಸಿಕೊಟ್ಟಳು.

ವರ್ಷಗಳು ಉರುಳಿದವು. ಆದರೆ ಈ ಯುವ ಸಾಧಕನಿಗೆ ಭಗವಂತನ ದರ್ಶನ ಆಗಲೇ ಇಲ್ಲ. ಕೊನೆಗೆ ವಯಸ್ಸಾದ ತನ್ನ ತಾಯಿಯನ್ನು ಸಂತೈಸಲು ಅವನು ಮನೆಗೆ ಮರಳಿ ಬಂದ.

ಬಾಗಿಲು ತೆರೆದಿತ್ತು. ಬಗ್ಗಿ ನೋಡಿದ ಅವನಿಗೆ ಕಂಡ ದೃಶ್ಯ ಇದು. ತಾಯಿಯು ದೇವರನ್ನು ಹೀಗೆ ಪ್ರಾರ್ಥಿಸುತ್ತಿದ್ದಾಳೆ: "ಭಗವಂತ, ದಯವಿಟ್ಟು ನನ್ನ ಮಗನಿಗೆ ನಿನ್ನ ದರ್ಶನವನ್ನು ಕೊಡು. ಇದೊಂದೇ ನನ್ನ ಆಸೆ. ನನಗೆ ಬೇರೆ ಏನೂ ಬೇಡ." ಅದನ್ನು ಕೇಳಿಸಿಕೊಂಡ ಮಗನಿಗೆ ನಾಚಿಕೆಯಾಯಿತು. "ಅಯ್ಯೋ, ಇಷ್ಟು ವರ್ಷಗಳಾದರೂ ನನ್ನ ತಾಯಿ ನನಗಾಗಿ ಪ್ರಾರ್ಥನೆ ಮಾಡುತ್ತಿದ್ದಾಳೆ. ಆದರೆ ನಾನು ಎಂತಹ ನೀಚ! ಒಂದು ಬಾರಿ ಕೂಡ ನನ್ನ ತಾಯಿಯನ್ನು ನೆನಪು ಮಾಡಿಕೊಳ್ಳಲಿಲ್ಲವಲ್ಲಾ!" ಹೀಗೆ ಯೋಚಿಸಿದ ಅವನಿಗೆ ಹಠಾತ್ತನೆ ಅರಿವು ಸ್ಫುರಿಸಿತು. ಅವನ ಹೃದಯದ ದ್ವಾರ ತೆರೆಯಿತು. ಅವನ ದೃಷ್ಟಿ ವಿಶಾಲವಾಯಿತು. ಅವನು ಹೀಗೆ ಅಂದುಕೊಂಡ: **"ಹೌದಲ್ಲವೇ, ನನ್ನ ಅಮ್ಮನಲ್ಲದೇ ಬೇರೆ ದೇವರು ಎಲ್ಲಿ ತಾನೇ ಹೊರಗೆ ಸಿಗುತ್ತಾನೆ?!"**

**(ಕತೆ ಮತ್ತು ಚಿತ್ರ: ಪಿ. ಪುರುಷೋತ್ತಮ ಕಾರಂತ)**

---

### ಭಾರತದೇಶದ ಮಹಾಪುರುಷರು– ಸುಶ್ರುತ



ಸುಶ್ರುತನು ಪ್ರಾಚೀನ ಭಾರತದ ಪ್ರಸಿದ್ಧ ಶಸ್ತ್ರಚಿಕಿತ್ಸಾತಜ್ಞನಾಗಿದ್ದಾನೆ. ಅವನು ರಚಿಸಿದ **ಸುಶ್ರುತ ಸಂಹಿತೆ**ಯಲ್ಲಿ ಅನೇಕ ವಿಧದ ಶಸ್ತ್ರಚಿಕಿತ್ಸೆಗಳ ವಿವರಗಳನ್ನು ಕಾಣಬಹುದು. ಈತನ ಕಾಲವು ಕ್ರಿ.ಪೂ. ೧೦೦೦ ಇರಬಹುದು ಎಂದು ವಿದ್ವಾಂಸರು ಹೇಳುವರು. ಶಸ್ತ್ರಚಿಕಿತ್ಸೆಯ ಕೌಶಲವನ್ನು **ಶಲ್ಯತಂತ್ರ**ವೆಂದು ಆ ಕಾಲದಲ್ಲಿ ಕರೆಯುತ್ತಿದ್ದರು. ಸುಶ್ರುತನು ಕಣ್ಣು, ಕರುಳು, ಮೂಳೆ ಮುಂತಾದ ಹಲವು ಮಾನವ ಅಂಗಗಳಿಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಗಳನ್ನು ವಿವರವಾಗಿ ತನ್ನ ಗ್ರಂಥದಲ್ಲಿ ವರ್ಣಿಸಿದ್ದಾನೆ. ಅವನು ಶಸ್ತ್ರಚಿಕಿತ್ಸೆಗಾಗಿ ಅರಿವಳಿಕೆಯನ್ನೂ ಉಪಯೋಗಿಸುತ್ತಿದ್ದನು; ಆಧುನಿಕ ಸಾಧನಗಳನ್ನು ಹೋಲುವ ಅನೇಕ ಉಪಕರಣಗಳನ್ನು ಬಳಸುತ್ತಿದ್ದನು. ಹೀಗೆ ಆಧುನಿಕ ಶಸ್ತ್ರಚಿಕಿತ್ಸೆಯ ಹಲವಾರು ತಂತ್ರಗಳನ್ನೂ ಅಷ್ಟು ಹಿಂದೆಯೇ ಸುಶ್ರುತ ಮುನಿಯು ಕರಗತ ಮಾಡಿಕೊಂಡಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಅದಲ್ಲದೆ ಸುಶ್ರುತನು ಮಾನವ ಶರೀರಶಾಸ್ತ್ರ ಮತ್ತು ಮಾನವ ದೇಹಕ್ಕೆ ತಗಲುವ ಗಾಯಗಳು ಮತ್ತು ವ್ಯಾಧಿಗಳು ಹಾಗೂ ಅವುಗಳ ಪರಿಹಾರ ವಿಧಾನಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದನು.

ನೈತಿಕ ನಂಬಿಕೆಗಳಿಂದಲೇ ಪರಿಪುಷ್ಟವಾಗಿದೆ" ಎಂದು ನುಡಿದರು.

ಮಾನವಶಾಸ್ತ್ರ ಮತ್ತು ನಾಗರಿಕತೆಗಳ ಸುಪ್ರಸಿದ್ಧ ವಿದ್ವಾಂಸರಾದ ಡಾ. ಎನ್. ಎಸ್. ರಾಜಾರಾಮ್ ಅವರು ನಾಗರಿಕತೆಗಳ ಮೂಲದ ಸಂಶೋಧನೆಯಲ್ಲಿ ಇತ್ತೀಚಿಗೆ ನಡೆಯುತ್ತಿರುವ ಹೊಸ ಅನ್ವೇಷಣೆಗಳ ಪ್ರಾಮುಖ್ಯತೆಯನ್ನು ವಿವರಿಸಿ ಹೇಳಿದರು. ಸತ್ಯದ ಅನ್ವೇಷಣೆಯಲ್ಲಿ ಸ್ವತಂತ್ರವೂ ನಿಷ್ಕಾರುಣವೂ ಆದ ಚರ್ಚೆ ನಡೆಯುವುದು ಬಹಳ ಅವಶ್ಯ. ಇಂದು ನಮ್ಮ ದೇಶದಲ್ಲಿ ಇದು ಇಲ್ಲದಿರುವುದು ದುರದೃಷ್ಟಕರ. ನಮ್ಮ ದೇಶದ ಜನರಲ್ಲಿ ಕ್ಷಾತ್ರಧರ್ಮವು ಉದ್ದೀಪನಗೊಳ್ಳಬೇಕು. ಈ ಕ್ಷಾತ್ರಧರ್ಮವು ಆಧ್ಯಾತ್ಮಿಕತೆಯ ಒಂದು ಅಂಗವೇ ಆಗಿದೆ. ಕ್ಷಾತ್ರಧರ್ಮ ಮತ್ತು ಬ್ರಾಹ್ಮಧರ್ಮಗಳ ಸಂಯೋಗ ಸಮಾಜದಲ್ಲಿ ಆಗಬೇಕು. ದುರ್ಬಲತೆಯು ಆಧ್ಯಾತ್ಮಿಕತೆಯ ಚಿನ್ಹೆಯಲ್ಲ ಎಂದು ನುಡಿದರು.



ಸಂಜೆಯ ಕಾರ್ಯಕ್ರಮದಲ್ಲಿ, ಎಡದಿಂದ ಸ್ವಾಮಿ ನಿತ್ಯಸ್ಥಾನಂದಜಿ, ಶ್ರೀ ಎಸ್. ಗುರುಮೂರ್ತಿ, ಶ್ರೀ ರಾಜೀವ್ ಮೆಹ್ರೋತ್ರಾ, ಸ್ವಾಮಿ ಸುರೇಶಾನಂದಜಿ, ಸ್ವಾಮಿ ಗೌತಮಾನಂದಜಿ, ಡಾ. ಎನ್. ಎಸ್. ರಾಜಾರಾಮ್

ಸುಪ್ರಸಿದ್ಧ ಮಾಧ್ಯಮ ಪ್ರಸ್ತುತಿಕಾರರೂ ಬರಹಗಾರರೂ ಆದ ಶ್ರೀ ರಾಜೀವ್ ಮೆಹ್ರೋತ್ರಾ ಅವರು ಬೆಳಗಿನ ವಿಚಾರ ಸಂಕಿರಣದಲ್ಲಿ ಮತ್ತು ಸಂಜೆಯ ಸಾರ್ವಜನಿಕ ಸಮಾರಂಭದಲ್ಲಿ ಕೂಡ ಮಾತನಾಡಿ, ಬಂಡವಾಳಶಾಹಿ ಸಂಸ್ಕೃತಿಗೆ ಪತ್ರಿಕಾಮಾಧ್ಯಮವೂ ಹೊರತಲ್ಲ ಎಂದು ಅಭಿಪ್ರಾಯಪಟ್ಟರು. ಆದ್ದರಿಂದಲೇ ಆಧ್ಯಾತ್ಮಿಕ ಭಾವನೆಗಳನ್ನು ಮಾಧ್ಯಮದ ಮೂಲಕ ಬರವಣಿಗೆಗೆ ಇಳಿಸುವುದು ಕಷ್ಟಸಾಧ್ಯ. ಆದರೆ ಆಧ್ಯಾತ್ಮಿಕತೆಯ ಮೌಲ್ಯಗಳ ಪ್ರಾಮುಖ್ಯತೆಯನ್ನು ಕಡಮೆ ಮಾಡಲು ಸಾಧ್ಯವಿಲ್ಲ. ಇದು ನಮ್ಮ ಸಮೃದ್ಧ ನಾಗರಿಕತೆ ಮತ್ತು ಪರಂಪರೆಯ ಅವಿಭಾಜ್ಯ ಅಂಗವಾಗಿದೆ. ಆದರೆ ಅವುಗಳನ್ನೇ ಸಂಪೂರ್ಣವಾಗಿ ನೆಚ್ಚಿಕೊಂಡು, ಸಂಕುಚಿತ ಮನೋಭಾವವನ್ನು ಬೆಳೆಸಿಕೊಳ್ಳುವುದು ಅನೇಕ ಸಮಸ್ಯೆಗಳಿಗೆ ಈಡುಮಾಡುತ್ತದೆ. ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ವಿಶ್ವವ್ಯಾಪಕ ತತ್ತ್ವಗಳನ್ನು ತಾವು ಬಾಳಿದ ಕಾಲಮಾನ ಮತ್ತು ಪರಿಸ್ಥಿತಿಗಳಿಗೆ ಹೊಂದುವಂತೆ ಅಳವಡಿಸಿಕೊಂಡು ಉಪದೇಶಿಸಿದರು. ಅದೇ ರೀತಿ ಈಗಿನ ಸಂದರ್ಭಕ್ಕೆ ಅನುಸಾರವಾಗಿ ಆಧ್ಯಾತ್ಮಿಕ ಮೌಲ್ಯಗಳನ್ನು ಬೋಧಿಸುವುದೇ ಆಧ್ಯಾತ್ಮಿಕ ಪತ್ರಿಕೋದ್ಯಮದ ಆದ್ಯ ಕರ್ತವ್ಯ. ಪತ್ರಿಕೋದ್ಯಮದ ಮುಖ್ಯ ಕರ್ತವ್ಯವೆಂದರೆ, ವರ್ತಮಾನವು ಅನಾವರಣಗೊಳ್ಳುತ್ತಿರುವುದನ್ನು ದಾಖಲಿಸುವುದು.



ನೆರೆದಿದ್ದ ಸಾಧುಗಳು ಮತ್ತು ವಿವೇಕಪ್ರಭದ ಅಭಿಮಾನಿಗಳು

ಆಧ್ಯಾತ್ಮಿಕ ಪತ್ರಿಕೋದ್ಯಮವೆಂದರೆ, ಮೌಲ್ಯಗಳ ಚೌಕ್ಕಟ್ಟಿನ ಒಳಗೆ ಪತ್ರಿಕೋದ್ಯಮದ ಕರ್ತವ್ಯವನ್ನು ನಿರ್ವಹಿಸುವುದು. ಆದರೆ ಸತ್ಯವು ಹೀಗೇ ಇದೆ ಎಂದು ನಿರ್ದಿಷ್ಟವಾಗಿ ಹೇಳಲಾಗದು. ಸತ್ಯವು ಯಾವಾಗಲೂ ಸಾಪೇಕ್ಷವಾಗಿರುತ್ತದೆ. ವಿವಿಧ ಜನರ ಅನುಭವದ ಮೇಲೆ ಸತ್ಯದ ಪರಿಕಲ್ಪನೆಯು ಬಗೆಬಗೆಯಾಗಿರುತ್ತದೆ. ನಮ್ಮ ದೈನಂದಿನ ಜೀವನದ ವಾಸ್ತವಿಕತೆಯು ವೈವಿಧ್ಯಮಯವಾಗಿರುತ್ತದೆ. ಆದ್ದರಿಂದ ಇದೇ ಸರಿ, ಇದೇ ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ಪತ್ರಿಕಾಕರ್ತನು ತನ್ನ ಬರಹಗಳ ಹಿನ್ನೆಲೆಯಲ್ಲಿ ಹೊಂದಿರುವ ಮನೋಭಾವವೇ ಪ್ರಮುಖವಾದುದು. ಇವತ್ತಿನ ವಿಷಯ ಆಧ್ಯಾತ್ಮಿಕ ಪತ್ರಿಕೋದ್ಯಮವೇ ಹೊರತು, ಧಾರ್ಮಿಕ ಪತ್ರಿಕೋದ್ಯಮವಲ್ಲ. ಸತ್ಯದ ಅನ್ವೇಷಣೆಯ ಹುರುಪಿನಲ್ಲಿ ಸಂಕುಚಿತ ಮನೋಭಾವವನ್ನು ನಾವು ಬೆಳೆಸಿಕೊಳ್ಳಬಾರದು. ರಾಮಕೃಷ್ಣ ಮಿಷನ್ ತನ್ನ ಚಟುವಟಿಕೆಗಳನ್ನು ನಡೆಸುತ್ತಿರುವುದು ಉದಾರವಾದ ಆಧ್ಯಾತ್ಮಿಕ ಪರಿಧಿಯಲ್ಲಿಯೇ ಹೊರತು, ಸಂಕುಚಿತವಾದ ಮತೀಯ ಆಯಾಮದಲ್ಲಲ್ಲ. ಆಧ್ಯಾತ್ಮಿಕತೆಯು ಜನರ ದಿನನಿತ್ಯದ ಸಮಸ್ಯೆಗಳಿಗೆ ಪರಿಹಾರ ನೀಡಬೇಕು. ಧರ್ಮ ಒಂದು ಜನಾಂಗದ ಹಿರಿಮೆಯನ್ನು ಎತ್ತಿಹೇಳುವ ಪೊಳ್ಳು ಘೋಷಣೆಯಾಗಬಾರದು. ಆಧ್ಯಾತ್ಮಿಕತೆಯು ವಾಸ್ತವಿಕತೆಯ ಆಧಾರದಲ್ಲಿ ಆಚರಿಸಲ್ಪಡಬೇಕು. ಅದು ಈ ಕಾಲದ ಭಾಷೆಯಲ್ಲಿ ವ್ಯಕ್ತವಾಗಿದ್ದು, ಇಂದಿನ ಸಮಸ್ಯೆಗಳಿಗೆ ಸ್ಪಂದಿಸಬೇಕು. ನಿಜವಾದ ಶಕ್ತಿ ಎಂದರೆ ಆಧ್ಯಾತ್ಮಿಕ ಶಕ್ತಿಯೇ ಹೊರತು, ಹಿಂಸಾತ್ಮಕ ಮಾರ್ಗಗಳಿಂದ ಪರಿಹಾರವನ್ನು ಕಂಡುಕೊಳ್ಳುವ ದೈತ್ಯಬಲವಲ್ಲ. ಅಂತಹ ಆಧ್ಯಾತ್ಮಿಕ ಶಕ್ತಿಯ ಉತ್ಥಾನವಾಗಲಿ. ಇದರಿಂದ ಬರುವ ಆತ್ಮವಿಶ್ವಾಸ, ಒಳ್ಳೆಯತನ, ಅನುಕಂಪ, ಪ್ರೀತಿ, ನಿರಹಂಕಾರ, ವಿನಯಗಳಿಂದ ಮಾತ್ರವೇ ಸಮಾಜದ ಕಲ್ಯಾಣ ಸಾಧ್ಯ. ಇದೇ ನಮ್ಮ ನಾಗರಿಕತೆಯ ಸಾರತತ್ತ್ವ ಎಂದು ಅವರು ವಿಶ್ಲೇಷಿಸಿದರು.

ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಅವರು ಮುಖ್ಯ ಅತಿಥಿಗಳಾಗಿದ್ದರು. ಮೈಸೂರು ಆಶ್ರಮದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸುರೇಶಾನಂದಜಿ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಬೆಳಗ್ಗೆ ಮತ್ತು ಸಂಜೆಯ ಕಾರ್ಯಕ್ರಮಗಳಲ್ಲಿ ಒಟ್ಟಾರೆ ೫೦೦ ಕ್ಕೂ ಅಭಿಮಾನಿಗಳು ಭಾಗವಹಿಸಿದ್ದರು.